

ಇವೆ. ಆ ಕಾಲೇಜಿನ ಯುವಕರು ಕೆಲವೊಮ್ಮೆ ರೈಲ್ವೆ ಹಳಿಗಳ ಮೇಲೆ ವಾಕಿಂಗ್ ಮಾಡುತ್ತಾ, ಮೋಜು-ಮಸ್ತಿ ಕೂಡ ನಡೆಸುತ್ತಾರೆ. ಕಿವಿಯಲ್ಲಿ ಶ್ರವಣ ಸಾಧನ ಹಾಕಿಕೊಂಡು ರೈಲ್ವೆ ಹಳ್ಳಿಗಳ ಮೇಲೆ ಮಾತನಾಡುತ್ತ ಅಥವಾ ಸಂಗೀತ ಕೇಳುತ್ತ ಹೋಗುವಾಗ ಒಂದಿಬ್ಬರು ವಿದ್ಯಾರ್ಥಿಗಳು ರೈಲಿಗೆ ಸಿಕ್ಕು ಪ್ರಾಣ ಕಳೆದುಕೊಂಡ ಘಟನೆಗಳೂ ನಡೆದಿವೆ. ಆಗಾಗ ಕೆಲವು ದನಕರುಗಳು ರೈಲಿಗೆ ಬಲಿಯಾದ ಪ್ರಸಂಗಗಳು ಇವೆ. ಅಂಥವರಿಗಾಗಿ ರೈಲು ಶಿಳ್ಳೆ ಹಾಕುತ್ತಲೇ ಚಲಿಸಬೇಕಾಗುತ್ತವೆ. ನಗರ ಪ್ರದೇಶಗಳಲ್ಲಿ ರೈಲು ಹಳಿಗಳಿಗೆ ತೀರ ಒತ್ತಾಗಿ ಮನೆಗಳು ಕೂಡ ಇರುವುದುಂಟು. ಆ ಮನೆ ಮತ್ತು ಅಲ್ಲಿನ ನಿವಾಸಿಗಳಿಗೆ ರೈಲಿನ ಓಡಾಟದ ಸದ್ದು, ಶಿಳ್ಳೆಗಳ ಸದ್ದು ತೀರ ಮಾಮೂಲಾಗಿ ರೈಲಿನ ಸದ್ದುಗದ್ದಲವಿಲ್ಲದಿದ್ದರೆ ಅವರಿಗೆ ತುಂಬಾ ಬಣಬಣ ಎನ್ನಿಸಬಹುದು. ನಿದ್ರೆಯೂ ಬರಲಿಕ್ಕಿಲ್ಲ. ರೈಲುಗಳ ಮೇಲೆ ಅವಲಂಬಿತರಾಗಿ ಜೀವನ ಕಟ್ಟಿಕೊಳ್ಳುವ ಎಷ್ಟೋ ಜನರಿಗೆ ರೈಲು ಹಳಿಗಳ ಬದಿಯ ಬದುಕು ಸಹ್ಯವಾಗಿಯೇ ಇರುತ್ತದೇನೋ.

ದಿನಾಲು ಸುಮಾರು ಒಂಬತ್ತು ಸಾವಿರ ರೈಲುಗಳು ದೇಶದ ಉದ್ದಗಲಕ್ಕೂ ಹರಿದಾಡುತ್ತವಂತೆ. ಅನೇಕ ನಗರ ಪಟ್ಟಣ, ಗ್ರಾಮಗಳನ್ನು ಸೀಳಿಕೊಂಡು ಶಿಳ್ಳೆ ಹಾಕುತ್ತಾ 'ದಡ್ ಬಡ್' ಶಬ್ದ ಮಾಡುತ್ತಾ ಸಾಗುವ ಸಹಸ್ರಾರು ರೈಲುಗಳ ಸದ್ದು ಕುರಿತು ಯಾರೂ ಯಾವ ಸದ್ದು ಮಾಡದಿರುವಾಗ ಅಥವಾ ಅವರಿಗೆ ಯಾವ ತೊಂದರೆ ಆಗದಿರುವಾಗ ನನ್ನದೇನು ಗೊಣಗಾಟ ಎಂದು ನೀವು ಅನ್ನಬಹುದು. ನಾವು ಭಾರತೀಯರು ಯಾವುದರ ವಿರುದ್ಧ ಸದ್ದು ಮಾಡುತ್ತೇವೆ. ಎಲ್ಲವೂ ದೈವೇಚ್ಛೆ ಎಂದು ಕಾಣದ ದೇವರ ಮೇಲೆ ಭಾರ ಹಾಕುತ್ತೇವೆ ಅಥವಾ 'ಅಲ್ಲಿರುವುದು ನಮ್ಮನೆ ಇಲ್ಲಿರುವುದು ಸುಮ್ಮನೆ' ಎಂದು ಆ ಮನೆಗೆ ಹೋಗುವವರೆಗೆ ತಾತ್ವಿಕ ನಿಲುವು ತಾಳಿ ಸುಮ್ಮನಿದ್ದು ಬಿಡುತ್ತೇವೆ.

ಜೀವನವೇ ಒಂದು ರೈಲು ಪಯಣ ಇದ್ದಂತೆ ಎಂಬುದು ತಿಳಿದವರ ಅಂಬೋಣ. ಒಂದು ನಿಲ್ದಾಣದಲ್ಲಿ ಹತ್ತಿ ನಮ್ಮ ನಿಲ್ದಾಣ ಬಂದಾಗ ಇಳಿದು, ಬೇರೆಯವರಿಗೆ ಸ್ಥಳಾವಕಾಶ ಮಾಡಿಕೊಡಬೇಕು. ರೈಲಿನಲ್ಲೂ, ಜೀವನದಲ್ಲೂ ಗೌಜು- ಗದ್ದಲ ಇದ್ದದ್ದೇ. ಕೆಲವರ ಪ್ರಯಾಣ ಆರಾಮ, ಇನ್ನೂ ಕೆಲವರಿಗೆ ಪ್ರಯಾಸದ ಪ್ರಯಾಣ. ಅಂತೂ ಪಯಣಿಸಬೇಕು, ಕೊನೆಯನ್ನು ಮುಟ್ಟಬೇಕು. ಒಳಗೂ ಹೊರಗೂ ಗದ್ದಲವಂತೂ ಇದ್ದದ್ದೇ.

ಮಹಾದೇವಿ ಅಕ್ಕನ ಕ್ಷಮೆ ಕೋರಿ ಹೇಳುವುದಾದರೆ:

**ರೈಲು ಹಳಿಯ ಬಳಿಯಲೊಂದು ಮನೆಯ ಮಾಡಿ**
**ರೈಲಿನ ಸದ್ದಿಗೆ ಬೆಚ್ಚಿದೊಡೆಂತಯ್ಯ,**
**ಮುಖ್ಯ ರಸ್ತೆಯಲೊಂದು ಮನೆಯ ಮಾಡಿ ವಾಹನಗಳ**
**ಗದ್ದಲಕೆ ಅಂಜಿದೊಡೆಂತಯ್ಯ,**
**ಕಲಿಗಾಲದೊಳಗೆ ಹುಟ್ಟಿ ಬಂದ ಬಳಿಕ ಯಾವುದಕ್ಕೂ**
**ಬೆದರದೆ ಬೆಚ್ಚದೆ ಸಮಾಧಾನಿಯಾಗಿರಬೇಕು**
**ನೋಡಯ್ಯ!** ●